**ಯಲಹಂಕ ವಿಧಾನಸಭಾ ಕ್ಷೇತ್ರ-ಚುನಾವಣಾ ಸಮೀಕ್ಷೆ.**

ಯಲಹಂಕವು ಒಂದು ನತ್ಯದೃಷ್ಟ ವಿಧಾನಸಭಾ ಕ್ಷೇತ್ರ. ಇದು ಅಭ್ಯರ್ಥಿಗಳಿಗೆ ಹಾಗೂ ಮತದಾರರಿಗೆ ಇಬ್ಬರಿಗೂ ಅನ್ವಯಿಸುತ್ತದೆ.ಕಳೆದ ಮೂರು ವರ್ಷಗಳಿಂದ ಪ್ರತಿ ವರ್ಷವೂ ಇಲ್ಲಿ ವಿಧಾನಸಭಾ ಚುನಾವಣೆ ನಡೆಯುತ್ತಿರುವುದು ಈ ಕ್ಷೇತ್ರದ ವಿಶೇಷ. ೧೯೯೩ ರಲ್ಲಿ ತಮ್ಮ ವಿಧಾನಸಭಾ ಸದಸ್ಯತ್ವದ ಅವಧಿ ಪೂರ್ಣಗೊಳ್ಳುವುದಕ್ಕೆ ಸುಮಾರು ಎರಡು ವರ್ಷಗಳಿರುವಂತೆಯೇ ಮಾಜಿ ಮಂತ್ರಿ ಮತ್ತು ದಲಿತ ನಾಯಕ ದಿ|| ಬಿ.ಬಸವಲಿಂಗಪ್ಪನವರು ಸ್ವರ್ಗಸ್ಥರಾದರು. ಆದ ಕಾರಣ ೧೯೯೩ ರ ಮೇ ೧೯ ರಂದು ಯಲಹಂಕ ಕ್ಷೇತ್ರಕ್ಕೆ ಉಪಚುನಾವಣೆ ನಡೆಯಿತು. ನಂತರ ೧೯೯೪ ರಲ್ಲಿ ಎಂದಿನಂತೆ ಮಿಕ್ಕೆಲ್ಲಾ ವಿಧಾನಸಭಾ ಕ್ಷೇತ್ರಗಳೊಂದಿಗೇ ಡಿಸೆಂಬರ ೧ ರಂದು ಯಲಹಂಕ ಕ್ಷೇತ್ರದಲ್ಲೂ ಚುನಾವಣೆ ನಡೆಸಲಾಯಿತು. ಆದರೆ ದುರಾದೃಷ್ಟವಶಾತ್ ೧೯೯೪ ರ ಚುನಾವಣೆಯಲ್ಲಿ ಜಯಶಾಲಿಗಳಾದ ಜನತಾದಳದ ನಾಯಕ ದಿ|| ಜಯಪ್ರಕಾಶ್ ನಾರಾಯಣ್ ರವರು ಶಾಸಕರಾಗಿ ಮೂರು ತಿಂಗಳು ಕಳೆಯುವಷ್ಟರಲ್ಲಿ ದೈವಾಧೀನರಾದರು. ಹೀಗೆ ತೆರವಾದ ಸ್ಥಾನಕ್ಕೆ ಇದೇ ತಿಂಗಳ ೨೭ ರಂದು ಉಪಚುನಾವಣೆ ನಡೆಯಲಿದೆ.
ಆದ್ದರಿಂದ ಯಲಹಂಕ ಕ್ಷೇತ್ರವು ಅಭ್ಯರ್ಥಿಗಳಿಗೆ ಹಾಗೂ ವರ್ಷಕ್ಕೊಮ್ಮೆ ಮತ ಚಲಾಯಿಸಬೇಕಾಗಿರುವ ಮತದಾರರಿಗೆ ನತದೃಷ್ಟವೆನಿಸಿದೆ. ಈ ಬಾರಿಯ ಚುನಾವಣೆಯಲ್ಲಿ ೪,೪೨,೦೦೦ ಮತದಾರರು ಈ ಕ್ಷೇತ್ರದಲ್ಲಿ ಮತ ಚಲಾಯಿಸಲಿದ್ದಾರೆ. ಇದು ಕಳೆದ ಬಾರಿಗಿಂತ ಸುಮಾರು ೮೫ ಸಾವಿರ ಮತ ಹೆಚ್ಚಳವಾಗಿದೆ.(ಕಳೆದ ೩,೫೭,೦೦೦ ಮತದಾರರು) ಆದರೆ ಮತಗಟ್ಟೆಗಳ ಸಂಖ್ಯೆಯಲ್ಲಿ ಹೆಚ್ಚಿನ ಬದಲಾವಣೆಯೇನೂ ಆಗಿಲ್ಲ. ಚುನಾವಣೆಯ ದಿನಾಂಕವನ್ನು ಅತಿ ಶೀಘ್ರವಾಗಿ ನಿರ್ಧರಿಸಿದ್ದರಿಂದ ಮತದಾರರಿಗೆ ತಕ್ಕಂತೆ ಮತಗಟ್ಟೆಗಳನ್ನು ಈ ಬಾರಿ ಹೆಚ್ಚಿಸಲಾಗಿಲ್ಲ. ಆದರೆ ಪ್ರತಿಯೊಂದು ಮತಗಟ್ಟೆಯಲ್ಲಿ ಕೇವಲ ೧,೫೦೦ ಮತದಾರರಿರಬೇಕಾಗಿರುವುದರಿಂದ ಅದಕ್ಕಿಂತ ಹೆಚ್ಚಿದ್ದಲ್ಲಿ 'ಎ' ಮತ್ತು 'ಬಿ' ಎಂಬ ಎರಡು ವಿಭಾಗಗಳಲ್ಲಿ ಅದೇ ಮತಗಟ್ಟೆಯ ಮತದಾರರು ಮತ ಚಲಾಯಿಸಬೇಕಾಗುತ್ತದೆ.

ಕಳೆದ ಚುನಾವಣೆಯಲ್ಲಿ ಜನತಾದಳವು ೬೩,೭೭೬ ಮತಗಳನ್ನು ಗಳಿಸಿ ಜಯಗಳಿಸಿತ್ತು. ಕಾಂಗೈ ೬೧,೭೫೫ ಮತಗಳನ್ನು ಪಡೆದು ಎರಡನೇ ಸ್ಥಾನ ಗಳಿಸಿದ್ದರೆ, ಬಿ.ಜೆ.ಪಿಯು ೫೬,೬೬೬ ಮತಗಳಿಸಿ ಮೂರನೇ ಸ್ಥಾನ ಪಡೆದಿತ್ತು.ಈ ಬಾರಿಯು ಕಳೆದ ಚುನಾವಣೆಯಲ್ಲಿ ನಿಂತಿದ್ದ ಅದೇ ಅಭ್ಯರ್ಥಿಗಳೇ ಕಣದಲ್ಲಿದ್ದಾರೆ. ಒಟ್ಟು ಅಭ್ಯರ್ಥಿಗಳ ಸಂಖ್ಯೆ ೨೦. ಈ ೨೦ ಅಭ್ಯರ್ಥಿಗಳಲ್ಲಿ ಕೇವಲ ಒಬ್ಬ ಮಹಿಳಾ ಅಭ್ಯರ್ಥಿ ಇದ್ದಾರೆ.ಜನತಾದಳದ ಶಿವರಾಜ್,ಕಾಂಗೈ ಪ್ರಸನ್ನಕುಮಾರ್,ಬಿಜೆಪಿಯ ಸಿ.ಮುನಿಯಪ್ಪ ಈ ಮೂವರ ನಡುವೆಯೇ ಹೋರಾಟವಿರುವುದು. ಇವರಲ್ಲದೆ ಕಾಂಗೈ ಪ್ರಸನ್ನಕುಮಾರರ ಸಹೋದರ ಶರತಚಂದ್ರ ಕಾಂಗ್ರೆಸ್ ಬಂಡಾಯ ಅಭ್ಯರ್ಥಿಯಾಗಿ ಸ್ಪರ್ಧಿಸುತಿದ್ದಾರೆ. ಜನತಾದಳಾದ ಅಭ್ಯರ್ಥಿ ಶಿವರಾಜರಿಗೆ ಬೆಂಬಲ ನೀಡುವುದಾಗಿ ಕೆಸಿಪಿ ಹಾಗೂ ಅಣ್ಣಾ ಡಿಎಂಕೆ ಪಕ್ಷಗಳು ಹೇಳಿಕೊಂಡಿವೆ. ಅಣ್ಣಾ ಡಿಎಂಕೆಯ ಬೆಂಬಲವನ್ನು ಪಡೆಯಲು ಸ್ವತ: ಮುಖ್ಯಮಂತ್ರಿ ದೇವೇಗೌಡರು ಶ್ರಮಪಟ್ಟಿರುವುದು ಇಲ್ಲಿನ ವಿಶೇಷ. ತಮ್ಮ ಪಕ್ಷಕ್ಕೆ ಅಣ್ಣಾ ಡಿಎಂಕೆ ಬೆಂಬಲಿಸುತ್ತಿರುವುದಕ್ಕಾಗಿ ತಮಿಳುನಾಡು ಮುಖ್ಯಮಂತ್ರಿ ಜಯಲಲಿತಾರವರಿಗೆ ದೇವೇಗೌಡರು ವಂದಿಸಿರುವುದು ಪತ್ರಿಕೆಗಳಲ್ಲಿ ಪ್ರಕಟವಾಗಿದೆ.

ಆದರೆ ಶಿವರಾಜ್ ರವರು ಸ್ಥಳೀಯ ಅಭ್ಯರ್ಥಿಯಲ್ಲ ಎಂಬ ದೂರು ಕೇಳಿಬರುತ್ತಿದೆ. ಐಟಿಸಿ ಕಂಪನಿಯ ನೌಕರರಾಗಿರುವ ಶಿವರಾಜ್ ಈ ಹಿಂದೆ ೧೯೮೯ರ ಚುನಾವಣೆಯಲ್ಲಿ ಸ್ಪರ್ಧಿಸಿ ಸೋಲುಂಡವರು. ಇವರು ತಮಿಳು ಆದಿ ದ್ರಾವಿಡರು ಎಂಬ ಕಾರಣದಿಂದ ನಾವು ಶಿವರಾಜ್ ರನ್ನು ಬೆಂಬಲಿಸುತ್ತಿದ್ದೇವೆ ಎಂದು

ಜಯಲಲಿತಾ ಹೇಳಿದ್ದಾರೆ. ಆದ್ದರಿಂದ ಶಿವರಾಜ್ ರನ್ನು ಕನ್ನಡಿಗರಲ್ಲದಿರುವುದೂ ಜನರಿಗೆ ಈಗ ಬೇಸರತಂದಿದೆ.

ಆದರೆ ಯಲಹಂಕ ಕ್ಷೇತ್ರದಲ್ಲಿ ಚುನಾವಣಾ ಪ್ರಚಾರವನ್ನು ಮೊದಲು ಪ್ರಾರಂಭಿಸಿರುವುದು ಜನತಾದಳ. ಮುಖ್ಯಮಂತ್ರಿ ದೇವೇಗೌಡರು ಯಲಹಂಕದ ಜನತೆಯನ್ನುದ್ದೇಶಿಸಿ ೧೩–೫–೯೫ ರಂದು ಮಾತನಾಡಿದರು.ಬಿಜೆಪಿ ಅಭ್ಯರ್ಥಿ ಸಿ.ಮುನಿಯಪ್ಪನವರು ಯಲಹಂಕ ಕ್ಷೇತ್ರದಲ್ಲಿ ಚಿರಪರಿಚಿತ ವ್ಯಕ್ತಿ. ಇವರು ಸ್ಥಳೀಯ ಅಭ್ಯರ್ಥಿ ಎಂಬುದೊಂದೇ ಅಲ್ಲದೆ, ಯುವಕರ ಬೆಂಬಲವೂ ಅಪಾರವಾಗಿದೆ. ಡಿಸೆಂಬರ ೯ ರಂದು ಚುನಾವಣೆಯ ಫಲಿತಾಂಶಗಳು ಹೊರಬಿದ್ದು ಬಿಜೆಪಿಯು ಸೋಲನುಭವಿಸಿದರೂ ಡಿ. ೧೦ ರಿಂದಲೇ ಜನಸಂಪರ್ಕವನ್ನು ಮುನಿಯಪ್ಪನವರು ಪ್ರಾರಂಭಿಸಿದರು. ಇದು ಕಾರ್ಯಕರ್ತರು ಹಾಗೂ ಮತದಾರರೆಲ್ಲರಿಗೂ ಮೆಚ್ಚುಗೆಯಾಗಿದೆ. ಭಾರತ್ ಎಲೆಕ್ಟ್ರಾನಿಕ್ ಸಂಸ್ಥೆಯಲ್ಲಿ ನೌಕರಿಯಲ್ಲಿರುವ ಮುನಿಯಪ್ಪನವರು ಈ ಬಾರಿ ಅನಿರೀಕ್ಷಿತ ಫಲಿತಾಂಶ ಒದಗಿಸಬಹುದು ಎಂದು ನಂಬಲಾಗಿದೆ. ಬಿಜೆಪಿಯ ರಾಜ್ಯ ಘಟಕವು ಯಲಹಂಕ ಚುನಾವಣೆಯ ಬಗ್ಗೆ ವಿಶೇಷ ಗಮನ ಹರಿಸಿದೆ. ಬಿಜೆಪಿಯ ರಾಜ್ಯಾಧ್ಯಕ್ಷ ಕೆ.ಎಸ್.ಈಶ್ವರಪ್ಪನವರ ಮೇಲ್ವಿಚಾರಣೆಯಲ್ಲಿ ಚುನಾವಣಾ ಕಾರ್ಯಗಳು ಇಲ್ಲಿ ನಡೆಯುತ್ತಿವೆ. ಪ್ರಸನ್ನಕುಮಾರವರು ತಮ್ಮ ಪ್ರಚಾರ ಕಾರ್ಯವನ್ನು ನಿಧಾನ ಗತಿಯಲ್ಲಿ ಪ್ರಾರಂಭಿಸಿದ್ದಾರೆ. ತಮ್ಮ ಸಹೋದರ ಹಾಗೂ ಬಂಧುಗಳೇ ಅವರ ವಿರುದ್ಧ ಪ್ರಚಾರ ನಡೆಸುತ್ತಿರುವುದು ತಿಳಿದು ಬಂದಿದೆ. ಜನತಾದಳಕ್ಕೆ ಯಲಹಂಕ ಚುನಾವಣೆಯು ಒಂದು ಸತ್ವ ಪರೀಕ್ಷೆ. ಐದು ತಿಂಗಳ ಅವಧಿಯಲ್ಲಿ ಸರ್ಕಾರವು ಮಾಡಿರುವ ಕೆಲಸಗಳಿಗೆ ಇದು ಕನ್ನಡಿ ಹಿಡಿಯಲಿದೆ. ಟಿ.ಎನ್.ಶೇಷನ್ ರ ನಿಯಮದಂತೆ ಕೇವಲ ೧,೩೫,೦೦೦ ರೂ, ಗಳಷ್ಟು ಮಾತ್ರ ಹಣ ಖರ್ಚು ಮಾಡಲು ಪ್ರತಿ ಅಭ್ಯರ್ಥಿಗೆ ಅವಕಾಶವಿರುತ್ತದೆ. ಈ ಹಳೇ ಹುಲಿಗಳ ಸೆಣಸಾಟದಲ್ಲಿ ಯಾರು ಜಯಗಳಿಸುವರೋ ಕಾದು ನೋಡಬೇಕಾಗಿದೆ.

Hosa Diganta     Yalahanka Chunavane Samikshe